doc-42(a)
T.P-2

Reg No B G 155 2 1 73

In The State First Golden Jubilee Celebrated Paper 'Satyavadi' daily, Mysore 4



ಮಹಾತ್ಮಾ ಏಸುವಿನ ಸಂದೇಶ

'ದೇವರು ನಿನ್ನ ಹೃದಯದೊಳಗೆ ನೋಡುತ್ತಾನೆ : ನೀನು ಯತಾರ್ಥವಾಗಿ ಪ್ರಾರ್ಥಿಸದಿದ್ದರೆ ದೇವರು ಆ ಪ್ರಾರ್ಥನೆಯನ್ನು ಕೇಳುತ್ತಾನೆ."

'ಮನುಷ್ಯನು ಸಾಯಕ್ಕೆ ದಾಸನಾಗಿರುವವರೆಗೂ ದೇವರು ಎಂದಿಗೂ ಅವನ ಅನ್ಯೋನ್ಯತೆಯಲ್ಲಿರುವುದಿಲ್ಲ."

"ಒಂದು ಬೀಜವನ್ನು ಕಲ್ಲಿನ ಮೇಲೆ ಬಿತ್ತಿದರೆ ಒಣಗಿ ಹೋಗುತ್ತದೆ : ಗುಡ್ಡದ ಬಿತ್ತಿದರೆ ಹಾಳಾಗುತ್ತದೆ : ಆದರೆ ಒಳ್ಳೆಯ ಮಣ್ಣಿನಲ್ಲಿ ಬಿತ್ತಿದರೆ ಒಂದೇ ಒಂದು ಕಾಳು, ಸಾವಿರ ಕಾಳಾಗಿ ಒಳ್ಳೆಯ ಫಲ ಕೊಡುತ್ತದೆ."

"ದೇವರೊಂದಿಗೆ ಮಾತನಾಡು ; ನಿನ್ನ ಪಾಪದ ಹೊಳೆಯಿಂದ ದಡ ಸೇರಲು ಮೆಟ್ಟಲುಗಳನ್ನು ಅತ ತೋರಿಸುತ್ತಾನೆ"

[ಕೃ. ಸಂ]

ಭೂಗರ್ಭದಲ್ಲಿ ರಕ್ಷಣೆ

ಪೀಕಿಂಗ್— ಇಲ್ಲಿಯ ಚಳ್ಳಕಿ ಹಾಸಿರುವ ಭೂಗರ್ಭ ರೈಲ್ವೆಗೆ ವಿಶೇಷ ಶಕ್ತಿ ಕೋಸ್ಕೋಗಿಗ ನ್ನು ಒಬ್ಬ ಮಾರ್ಗದರ್ಶಕನೊಡನೆ ಕರೆದುಕೊಂಡುಹೋಗಿ, ಅಲ್ಲಿನ ಕೆಲಸಕಾರ್ಯಗಳನ್ನೆಲ್ಲಾ ತೋರಿಸಿ ವಿವರಿಸಲಾಯಿತು – 1969 ರಲ್ಲಿ ಸುಮಾರು ರೂ 72500 ಖರ್ಚಿನಲ್ಲಿ ನಿರ್ಮಿಸಲಾಗಿರುವ ಈ ರೈಲ್ವೆನು, ಪರಮಾಣು ಅಥವಾ ಬೇರೆ ರೀತಿಯ ಭೀಕರ ಧ್ವಂಸಕಾರಿ ಬಾಂಬುದಾಳಿಯ ಪೀಕಿಂಗಿನ ಪೂರ್ತಿ ಜನಸಂಖ್ಯೆಯನ್ನು ಭೂಗರ್ಭದಲ್ಲಿರುವ ವಿಮಾನ ಧಾಳಿ ವಿರುದ್ಧದ ರಕ್ಷಣಾ ಸ್ಥಳಗಳಿಗೆ ಒಯ್ಯುವುದು – ಈಗ ಒಂದೇ ರೈಲ್ವೇ ಲೈನಿದ್ದು, ಇದ 23 ಕೆಎಂ ಉದ್ದವಿದೆ, ಪೀಕಿಂದು ರೈಲ್ವೆ ಸ್ಟೇಷನ್ನಿನಿಂದ ಪಶ್ಚಿಮ ಉಪನಗರದಲ್ಲಿರುವ ಉಕ್ಕು ಕಬ್ಬಿಣ ಕಂಪನಿಯವರೆಗಿದೆ.

ಜನಸಂಘದ ವಿಜಯ

ಉಡುಪಿ— ಪೌರಸಭಾ ಚುನಾವಣೆಯಲ್ಲಿ 19 ಸ್ಥಾನಗಳಲ್ಲಿ ಜನ ಸಂಘವು 13 ಸ್ಥಾನಗಳನ್ನು ಗಳಿಸಿತು

ಕಾನ್ವೊಕೇಷನ್

ಮೈಸೂರು— ವಿಶ್ವವಿದ್ಯಾಲಯದ ಕಾನ್ವೊಕೇಷನ್ ಜನವರಿ 13 ರಲ್ಲಿ ನಡೆಯುವುದು : ಕೇಂದ್ರ ವಿದ್ಯಾಮಂತ್ರಿ ಪ್ರೊ ॥ ನುರುಲ್ ಹಸನ್ ಭಾಷಣ ಮಾಡುವರು.

ರಾಜ್ಯ ವಿಭಜನೆ

ವಿಶಾಖಪಟ್ಟಣ – ಭೂಮಿಯ ಮೇಲಿನ ಯಾವ ಶಕ್ತಿಯೂ ರಾಜ್ಯದ ವಿಭಜನೆ ತಪ್ಪಿಸಲು ಸಾಧ್ಯವಿಲ್ಲವೆಂದು ಆಂಧ್ರ ಚಳವಳಿ ನಾಯಕರು ಹೇಳುತ್ತಿರುವರು.

ದತ್ತಾತ್ರೇಯ ದೇವಸ್ಥಾನ ಜೀರ್ಣೋದ್ಧಾರ

ಹಿಡಲ್‌ಬರ್ಗ್ (ಜರ್ಮನಿ)— ನೇಪಾಳವಲಯದ ದತ್ತಾತ್ರೇಯ ಜೀರ್ಣೋದ್ಧಾರ ಕಾರ್ಯಗಳು ಮುಗಿದು ಪೂಜಾರಿಯ ನಿವಾಸವನ್ನು ನೇಪಾಳ ರಾಣಿಯ ವಶಕ್ಕೆ ಒಪ್ಪಿಸಲಾಗಿದೆ ; ಅಧ್ಯಕ್ಷ ಗಸ್ಟೌ ಹೀನ್‌ಮ್ಯಾರ್ಕರವರು 1970 ರಲ್ಲಿ ವಿವಾಹದ ಬಳುವಳಿಯಾಗಿ ನೇಪಾಳದ ಭಕ್ತಾಪುರದಲ್ಲಿನ ದತ್ತಾತ್ರೇಯ ದೇವಾಲಯದ ಜೀರ್ಣೋದ್ಧಾರ ಮಾಡಿಸಿಕೊಡುವುದಾಗಿ ರಾಜ ಬೀರೇಂದ್ರರವರಿಗೆ ತಿಳಿಸಿದ್ದರು – ಪ್ರಪಂಚ ಪ್ರಸಿದ್ಧಿ ಪಡೆದ ಭಕ್ತಾಪುರದ ದತ್ತಾತ್ರೇಯದಲ್ಲಿನ ಮರದ ಕೆತ್ತನೆಗಳು ನವಿಲಿನ ಕಿಟಕಿಗಳ ಜೀರ್ಣೋದ್ಧಾರ ಕಾರ್ಯವು ಕಳೆದ ಎಂಟು ತಿಂಗಳಿಂದ ನಡೆಯುತ್ತಿದೆ (ಯು ಪಿ ಎಸ್)

ಗೋಳೀಬಾರ್

ಡಾಕಾ— ಅಮೇರಿಕಾ ಫೈಬ್ರರಿ ಮುಂದೆ ಹತೋಟಿ ಮೀರಿದ ಗುಂಪಿನ ಮೇಲೆ ಪೋಲೀಸರು ಗೋಳೀಬಾರು ಮಾಡಿದರು ; ಈಬ್ಬರು ಸತ್ತು 4 ಮಂದಿ ಗಾಯಗೊಂಡರು.

ಲಾಟ್ರಿ ಮೂಲಕ ನಿವೇಶನ ಹಂಚಿಕೆ

ದಾವಣಗೆರೆ— ಭೂಮಿಯಿಲ್ಲದವರಿಗೆ ಮನೆ ನಿವೇಶನವನ್ನು ಲಾಟರಿ ಮೂಲಕ ಹಂಚಲು ಪುರಸಭೆ ನಿರ್ಧರಿಸಿದೆ – 2500 ನಿವೇಶನಗಳು ಸಿದ್ಧಗೊಳಿಸಲಾಗಿದ್ದು 4 ಸಾವಿರ ಅರ್ಜಿಗಳು ಬಂದಿವೆ.

ಮಹಾತಾಯಿ

ಚಂಡೀಘರ— ಪ್ರಖ್ಯಾತ ಹುತಾತ್ಮ ಭಗತ್ ಸಿಂಗ್‌ರ ತಾಯಿ ಶ್ರೀಮತಿ ವಿದ್ಯಾವತಿಯವರಿಗೆ ಪಂಜಾಬು ಸರಕಾರವು ಒಂದು ಸಮಾರಂಭದಲ್ಲಿ "ಪಂಜಾಬ್ ಮಾತಾ" ಎಂಬ ಬಿರುದನ್ನು ಕೊಟ್ಟಿತು ; ಒಂದು ಕಾರು ಕೊಡಲಾಯಿತು – ಮಾಹೆಯಾನ ರೂ. 1000 ಕೊಡಲಾಗುವುದು.

ವಿಭಜನೆಗೆ ಒತ್ತಾಯ

ತಿರುಪತಿ— ಆಂಧ್ರದ 11 ಕಾಂಗ್ರೆಸ್ ಎಂ ಪಿ ಗಳು ಪ್ರಧಾನಿಯವರಿಗೆ ಬರೆದ ಜಂಟಿ ಪತ್ರದಲ್ಲಿ– ಆಂಧ್ರ ಭಾಗವು ತೀರ ಗುಡಾಂತರಕ್ಕೆ ಎಸೆಯಲ್ಪಡುವದಕ್ಕೆ ಮುಂಚೆ ಮತ್ತು ಇನ್ನೂ ಹೆಚ್ಚು ಪ್ರಾಣ ಹಾನಿ ಜನತಾ ಸಂಕಟ ಮತ್ತು ಕವ್ವನಷ್ಟ ತಪ್ಪಿಸಲು ಆಂಧ್ರ ಪ್ರದೇಶವನ್ನು ವಿಭಜಿಸಲ್ಪಡುವುದಾಗಿ ಒತ್ತಾಯ ಮಾಡಿದ್ದಾರೆ – ತಿರುಪತಿ ಸಭೆಯಲ್ಲಿ ಪ್ರತ್ಯೇಕ ಆಂಧ್ರದ ಬೆಂಬಲಿಗರಾದ ಶಾಸಕರಿಗೆ, ಎಂ ಜಿ ಓಗಳಿಗೆ, ವಿದ್ಯಾರ್ಥಿಗಳಿಗೆ, ರಾಜ್ಯದ ಆಡಳಿತ ತಳಮಳಿಸುವಂತೆ, ಕರನಿರಾಕರಣ, ಪ್ರತಿಬಂಧಕಾಜ್ಞೋಲ್ಲಂಘನೆ ಮತ್ತಿತರ ಕಾರ್ಯಗಳನ್ನು ಕೈಗೊಳ್ಳಲು ಕರೆ ಕೊಡಲಾಗಿದೆ.

ಗುಲ್ಬರ್ಗ— ಕಳೆದ ವರ್ಷದ ಗಲಭೆಯಲ್ಲಿ ಡ್ಯಾಮೇಜುಗೊಂಡ ಮಸೀತಿ, ದೇವಾಲಯ ಮುಂತಾದ ಪೂಜಾಸ್ಥಾನಗಳನ್ನು ಸರಕಾರ ರಿಪೇರಿ ಮಾಡಿಸಲಿದೆ

ನಂ. ಎಸ್ಎಎಸ್. 192–3472/72–73

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

1972–73 ನೇ ಸಾಲಿನಲ್ಲಿ ಕಾಕನಕೋಟೆ ರೇಂಜ್‌ನ ಪುನರ್ವಸತೀಕರಣ ಪ್ರದೇಶಗಳಿಂದ ಟಿಂಡರ್ – ಮತ್ತು – ಹರಾಜು ಮೂಲಕ ಮರದ ಸೌದೆಗಳನ್ನು ಸಾಗಾಣಿಕೆ ಮಾಡುವುದು

★

ಈ ಮೂಲಕ ಸಾರ್ವಜನಿಕ ಪ್ರಕಟಣೆಗಾಗಿ ತಿಳಿಯಪಡಿಸುವುದೇನೆಂದರೆ ತೇಗ, ಬೀಟೆ ಮತ್ತು ಗಂಧದ ಮರ ಇವನ್ನು ಬಿಟ್ಟು ಉಳಿದ ಎಲ್ಲ ಜಾತಿಯ ಮರಗಳ ಸೌದೆಗಳನ್ನು ಸಂಗ್ರಹಣೆ ಮಾಡುವ ಮತ್ತು ಸಾಗಾಣಿಕೆ ಮಾಡುವ ಹಕ್ಕನ್ನು ಈ ಕೆಳಗೆ ಇರುವ ಷೆಡ್ಯೂಲ್‌ನಲ್ಲಿ ಸೂಚಿಸಿರುವ ಪ್ರದೇಶಗಳಲ್ಲಿ ಟಿಂಡರ್ – ಮತ್ತು – ಹರಾಜು ಮೂಲಕದ ಆಧಾರದ ಮೇಲೆ ಮೈಸೂರಿನಲ್ಲಿರುವ, ಮೈಸೂರು ವಿಭಾಗದ ವಿಭಾಗ ಅರಣ್ಯ ಅಧಿಕಾರಿಯವರಿಂದ ಅಥವಾ ಈ ಉದ್ದೇಶಕ್ಕಾಗಿ ಮೈಸೂರಿನಲ್ಲಿರುವ ವಿಭಾಗ ಅರಣ್ಯ ಅಧಿಕಾರಿಯವರಿಂದ ಅಧಿಕಾರ ಕೊಡಲ್ಪಟ್ಟ ಇತರ ಯಾವುದೇ ಅಧಿಕಾರಿಯವರಿಂದಾಗಲೀ ಮೂಲಕ ಮಾಡಲ್ಪಡುವುದು.

1 ಕಾಲ ಮತ್ತು ಟಿಂಡರ್‌ಗಳನ್ನು ಸ್ವೀಕರಿಸುವ ತಾರೀಖು :

ಮಧ್ಯಾಹ್ನ 3 ಗಂಟೆ ವರೆಗೆ 12–1–1973 ರಂದು

2 ಕಾಲ ಮತ್ತು ಹರಾಜು ಮೂಲಕದ ತಾರೀಖು :

ಮಧ್ಯಾಹ್ನ 3–30 ಗಂಟೆ ವರೆಗೆ 12–1–1973 ರಂದು

— ಷೆಡ್ಯೂಲ್ —

ಪ್ರದೇಶದ ಹೆಸರು	ಅಂದಾಜು ಪ್ರಮಾಣ	ಖಾಯಂ ಅಜ್ಞೆ ತಲಪುವದರಿಂದ ಕಾಲಾವಕಾಶ
1 ಕಾಕನಕೋಟೆ ರೇಂಜ್ 1972–73 ತೇಗ ಆರ್. ಎ. 100 ಎಕರೆಗಳು	2 ನೇ ರಖಂನ 80 ಲಾರಿ ಲೋಡ್‌ಗಳು 9 ಟ್ಗಳು	60 ದಿನಗಳು
2 – ಡಿಟೋ – 1972–73 ಮೃದುವಾದ ಮರ ಆರ್. ಎ. 50 ಎಕರೆಗಳು	2 ನೇ ರಖಂದ 35 ಲಾರಿ ಲೋಡ್‌ಗಳು 9 ಟ್ಗಳು	60 ದಿನಗಳು

1 11–1–1973 ನೇ ಸಂಜೆ 5–50 ರ ವರೆಗೆ ಅಥವಾ ಅದಕ್ಕೆ ಮುಂಚೆ ಪ್ರತಿ ಯೂನಿಟ್‌ಗೆ ಪ್ರತ್ಯೇಕವಾಗಿ ಫಾರಂಗಳನ್ನು ಪ್ರತಿ ಫಾರಂಗೆ ಮಾರಾಟ ತೆರಿಗೆ ಯೊಡನೆ ರೂ 5/– ಪಾವತಿ ಮಾಡಿ ಟೆಂಡರ್ ಫಾರಂಗಳನ್ನು ಪಡೆಯುವುದು.

2 ಪ್ರತಿ ಪ್ರದೇಶಕ್ಕೂ ಪ್ರತ್ಯೇಕವಾಗಿ ರೂ. 500/– ಇ. ಎಂ. ಡಿ. ಪಾವತಿ ಮಾಡಬೇಕು.

3 ಕೆಲಸದ ವೇಳೆಗಳಲ್ಲಿ ಈ ಕಚೇರಿಯಿಂದ ವಿವರವಾದ ಪರತ್ತುಗಳನ್ನು ಹೊಂದಬಹುದು.

ಸಹಿ/– ಈರಪ್ಪ,
ವಿಭಾಗ ಅರಣ್ಯ ಅಧಿಕಾರಿಯವರು, ಮೈಸೂರು.

ನಿರಂತರ 8000 ಪ್ರಹಾರ !

ಚಿಕ್ಕಮಗಳೂರು— ರಾಷ್ಟ್ರೀಯ ಸ್ವಯಂಸೇವಕ ಸಂಘದ ಆಶ್ರಯದಲ್ಲಿ ತಾ|| 10 ರಂದು ನಡೆದ ದಂಡನ ಸ್ಪರ್ಧೆಯಲ್ಲಿ 7 ತರುಣರು ಎರಡೂವರೆ ಗಂಟೆಯಲ್ಲಿ ನಿರಂತರ 8000 ಪ್ರಹಾರಗಳನ್ನು ಹೊಡೆದರು ; ಇತರ 27 ತರುಣರು 2500 ಕ್ಕಿಂತ ಹೆಚ್ಚು ಪ್ರಹಾರಗಳನ್ನು ಹೊಡೆದರು (ವಿಕ್ರಮ)

★

ಬೆಲೆ ಏರಿಕೆ

ನವದೆಹಲಿ— ಡಿಸೆಂಬರ್ 9 ಕ್ಕೆ ಅದವಾರದಲ್ಲಿ ಒಟ್ಟಾರೆ ಬೆಲೆ ಸೂಚಿ 211.2 ಇದ್ದು 14.1 ಹೆಚ್ಚಿದೆ.

ಪ್ರವಾಹ ಸಂತ್ರಸ್ತರ ಪರಿಹಾರನಿಧಿ ಸಂಗ್ರಹಕ್ಕೆ

ತಾ.3-1-73 ರಂದು ಪಾದಯಾತ್ರೆ

ಮಹನೀಯರೆ,

ಚಿಕ್ಕಹೊಳ್ಳೆ ಅಣೆಕಟ್ಟು ಒಡೆದು ದುರಂತಕ್ಕೀಡಾದ ಈ ಜಿಲ್ಲೆಯ ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ ತಾಲ್ಲೂಕುಗಳ ಸುಮಾರು 50 ಕ್ಕೂ ಮಿಗಿಲಾದ ಗ್ರಾಮಗಳಲ್ಲಿ ಹಲವು ಸಹಸ್ರ ಜನರು ತಮ್ಮ ಸಕಲವನ್ನೂ ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ. ಸರಕಾರವು ಈ ನಿರಾಶ್ರಿತರಿಗೆ ಆಹಾರ ಹಂಗಾಮಿ ವಸತಿ ಬಗ್ಗೆ ಸಲಕರಣೆ, ಸಣ್ಣಮಟ್ಟಿನ ನಗದು ಪರಿಹಾರ ಮತ್ತು ಬಡ್ಡಿರಹಿತ ಸಾಲ ಮೊದಲಾದವುಗಳನ್ನು ಒದಗಿಸುತ್ತಿದೆ. ಆದರೆ ಸಾರ್ವಜನಿಕ ಬೆಂಬಲ ಮತ್ತು ಸಹಾಯವು ಸಂಪೂರ್ಣವಾಗಿ ಬರದಿದ್ದಲ್ಲಿ, ಈ ನಿರಾಶ್ರಿತರ ಪುನರ್ವಸತಿ ಮೊದಲಾದ ಕಾರ್ಯಕ್ರಮಗಳು ಸಂಪೂರ್ಣಗೊಳ್ಳುವಂತಿಲ್ಲ.

★

ಪ್ರವಾಹ ಸಂತ್ರಸ್ತರ ಪರಿಹಾರನಿಧಿ ಸಂಗ್ರಹಕ್ಕೆ

ಮೈಸೂರು ನಗರದಲ್ಲಿ ತಾ || 3-1-73 ರಂದು ಬೆಳಿಗ್ಗೆ 8-30 ಕ್ಕೆ ಸರಿಯಾಗಿ

ಮೈಸೂರು ಪುರಭವನದಿಂದ ಪ್ರಮುಖ ನಾಗರೀಕರು ಅಧಿಕಾರಿಗಳು ಮಂತ್ರಿಗಳರು ಪಾದಯಾತ್ರೆಯನ್ನು ನಡೆಸಲು ನಿರ್ಧರಿಸುತ್ತಾರೆ. ಈ ಪಾದಯಾತ್ರೆಯಲ್ಲಿ ಮೈಸೂರು ರಾಜ್ಯದ ಪ್ರಖ್ಯಾತ ಚಲನಚಿತ್ರ ನಟನಟಿಯರು ಭಾಗವಹಿಸುತ್ತಾರೆ. ಸಾರ್ವಜನಿಕರು ಈ ಪಾದಯಾತ್ರೆಯ ಉದ್ದೇಶವು ಸಫಲವಾಗುವಂತೆ ಉದಾರವಾಗಿ ಧನ, ಧಾನ್ಯ, ವಸ್ತ್ರ ಮೊದಲಾದುವುಗಳನ್ನು ದಾನಮಾಡಿ, ಸಹಕರಿಸಬೇಕೆಂದು ಈ ಮೂಲಕ ಪ್ರಾರ್ಥಿಸಿಕೊಳ್ಳಲಾಗಿದೆ.

ಡಿ. ಕೃಷ್ಣ

ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಮತ್ತು ಪಾದಯಾತ್ರೆ ಸಮಿತಿ ಅಧ್ಯಕ್ಷರು

ಭಾರತದಲ್ಲಿ ಗೋವಧೆ ಪೂರ್ಣ ನಿಷೇಧವಾಗಲಿ

Edited Printed and Published by Dharmapracharanirata M S Krishna Rao (Proprietor) at the Satyavadi Press, Chamaraja puram, Mysore 4

ವುಡ್‌ಲಾಂಡ್ಸ್ 29 12 72 ರಿಂದಪ್ರದರ್ಶನ 3ನೇ ವಾರ

ಸೆವೆನ್ ಆರ್ಟ್ಸ್ ಪಿಕ್ಚರ್ಸ್‌ರವರ ಹಿಂದಿ ವರ್ಣ ಚಿತ್ರ

ರಾಜಾ ಜಾನಿ

ಪ್ರತಿ ದಿನ 3 ಪ್ರದರ್ಶನಗಳು

ಪಾತ್ರ – ಧರ್ಮೇಂದ್ರ ಹೇಮಮಾಲಿನಿ ಪ್ರೇಂಚೋಪ್ರ ಪ್ರೇಂನಾಥ್

ಹೆಲ್ಪ್ ಸಂಗೀತ – ಲಕ್ಷ್ಮೀಕಾಂತ್ ವ್ಯಾರೇಲಾಲ್

ಬೆಳಗಿನ ಪ್ರದರ್ಶನ 10-30 ವೀರಸಂಕಲ್ಪ

ಅಪೇರಾ 28 12 72 ರಿಂದ

ಜಯಂತಿ ಫಿಲಂಸ್‌ರವರ ಈಸ್ಟ್‌ಮನ್ ಕಲರ್ ತಮಿಳು ಚಿತ್ರ

ರಾಮನ್ ತೇಡಿಯ ಸೀತೈ

ಪಾತ್ರ – ಎಂ. ಜಿ ರಾಮಚಂದ್ರನ್ ಜಯಲಲಿತ ತಾಯ್‌ನಾಗೇಶ್

ವಿ. ಕೆ. ರಾಮಸ್ವಾಮಿ

ಸಂಗೀತ – ಎಂ ಎಸ್. ವಿಶ್ವನಾಥನ್ ನಿರ್ದೇಶನ – ಪಿ ನೀಲಕಂಠನ್

ದಿನ 3 ಪ್ರದರ್ಶನಗಳು

Protect the Cow



Help The Gorakshana

— Humanitarian Propoganda Monthly....

Quality Printing Neat Binding

Lakshminarasimha Press

Sivarampet, Mysore 1

For Mosquito Nets in all sizes Visit Bank Road Bahusar, Mysore